**ಅ.ದಾವಾ. ನಂ. 341 /13** **ಪಿ.ಡಬ್ಲ್ಯೂ-1**

**ದಿನಾಂಕ 14/03/2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್.ಡಿ.ಆರ್ ವಕೀಲರಿಂದ**

ದಾವಾ ಅಸ್ತಿಗೆ ಸಂಬಂಧಿಸಿದ ಇ-ಸ್ವತ್ತಿನ 2 ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ 19 ಮತ್ತು 20 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ ಎಂ.ಕೆ.ಡಿ ವಕೀಲರಿಂದ

ಈ ದಾವೆ ದಾಖಲಿಸುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಇ-ಸ್ವತ್ತು ಆಗಿರಲಿಲ್ಲ ಎಂದರೆ ಸರಿ. ನಂತರ ಇ-ಸ್ವತ್ತು ಮಾಡಿಸಿಕೊಳ್ಳುವ ಸಮಯದಲ್ಲಿ ಪ್ರತಿ ಅಡಿ ಆಸ್ತಿಗೆ 40 ರೂ. ಹಣ ಸಂದಾಯ ಮಾಡಿದ್ದೇನೆ ಎಂದರೆ ಸರಿ. ಈಗ ದಾವಾ ಆಸ್ತಿಯಲ್ಲಿ ರಸ್ತೆ ವ್ಯವಸ್ಥೆ ಮಾಡಲಾಗಿದೆ ಆದರೆ ಚರಂಡಿಯ ವ್ಯವಸ್ಥೆ ಇನ್ನೂ ಆಗಿಲ್ಲ. ಸದರಿ ರಸ್ತೆ ಪೂರ್ವ ಪಶ್ಚಿಮವಾಗಿದ್ದು 20 ಅಡಿ ಅಗಲ ಇದೆ ಹಾಗೂ 40 ಅಡಿ ಉದ್ದ ಇದೆ. ದಾವಾ ಆಸ್ತಿ ಒಟ್ಟು ಪೂರ್ವ ಪಶ್ಚಿಮ 42 ಅಡಿ ಮತ್ತು ಉತ್ತರ ದಕ್ಷಿಣ 73 ಅಡಿ ಇದೆ. ಇ-ಸ್ವತ್ತು ಮಾಡುವ ಮೊದಲು ಪುರಸಭೆ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ನಾನು ಇರಲಿಲ್ಲ. ಆದರೆ ಅಧೀಕಾರಿಗಳು ಪರಿಶೀಲನೆ ಮಾಡಿರುವ ಬಗ್ಗೆ ನನಗೆ ತಿಳಿಸಿದ್ದಾರೆ. ಸದರಿ ಅಧಿಕಾರಿಗಳು ಆ ಸಮಯದಲ್ಲಿ ಮಾಡಿದ ಅಳತೆಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸುವುದರಿಂದ ನನಗೆ ಅನಾನುಕೂಲ ಆಗುತ್ತದೆ ಎಂದು ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.